ಮುಗಿಸಿ ಕೈ ತೊಳೆದುಕೊಂಡೆನೆಂದು ಅಪ್ಪ ಬೀಗಿದ. ಬಲಗಾಲಿಟ್ಟು ಗಂಡನ ಮನೆ ಪ್ರವೇಶಿಸಿದ ಹೊಸ ಮದುವಣಗಿತ್ತಿಯ ಕಣ್ಣಿಗೆ ಸತ್ಯ ಗೋಚರವಾಗಲು ಬಹಳ ಕಾಲ ಬೇಕಾಗಲಿಲ್ಲ. ಮನೆ, ಜಮೀನಿನ ಕೆಲಸಕ್ಕೆ ಬರುತ್ತಿದ್ದ ಹರೆಯದ ಹೆಣ್ಣಾಳುಗಳ ಪೈಕಿ ಇವನು ತಿನ್ನದೆ ಬಿಟ್ಟವರು ಇಲ್ಲವೆಂಬಷ್ಟು ಕಮ್ಮಿ. ಅದೇನು ವಶೀಕರಣ ಶಕ್ತಿಯಿತ್ತೋ, ಇವನು ಕಣ್ಣಿಟ್ಟವರೆಲ್ಲಾ ಇವನಿಗೆ ಬಲಿ ಬೀಳುತ್ತಿದ್ದರು ಎನ್ನುವ ವದಂತಿ. ಇಂತಾ ರಸಿಕನಿಗೆ 'ಕುತ್ತಿಗೆಗೊಂದು ಕುಂಟೆ ಕಟ್ಟಿ' ದಾರಿಗೆ ತರುವ ಉದ್ದೇಶದಿಂದ ಮನೆಯವರು ಮದುವೆ ಮಾಡಿದ್ದಾರೆ. ಕುಲದ ಮರ್ಯಾದೆ ಉಳಿಸಿಕೊಳ್ಳಲು ಇವಳನ್ನೊಂದು ಬಲಿಪಶುವನ್ನಾಗಿಸಿದ್ದಾರೆ. ಮಗ್ಗುಲಲ್ಲಿ ಮಲಗಿದವನು ಇದ್ದಕ್ಕಿದ್ದಂತೆ ನಡುರಾತ್ರಿಯಲ್ಲಿ ನಾಪತ್ತೆಯಾಗುವುದರ ಕುರಿತಾದ ಮರ್ಮ ಕ್ರಮೇಣ ಗೊತ್ತಾಗಿತ್ತು, ಮತ್ಸರದಿಂದಲಾದರೂ ಸೈ, ಇನ್ನೊಬ್ಬ ಆಳುಮಗಳು ಈ ಬಗ್ಗೆ ಇವಳ ಕಿವಿ ಕಚ್ಚಿದ ಮೇಲೆ.

"ಇಂತೋರು ನನ್ನಾಕೆ ಮದುವೆ ಆದ್ರಿ?" ರಾಧ ಅವನನ್ನು ನೇರವಾಗಿ ಪ್ರಶ್ನಿಸಿದ್ದಳು.

"ಓ, ಯಾರೋ ಎಲ್ಲಾ ವರೆದುಬಿಟ್ಟಿದಾರಾ, ಒಂದಕ್ಕೆ ಒಂಬತ್ತು ಸೇರ್ಸಿ..."

"ಸತ್ಯಾನಾ, ಸುಳ್ಳಾ, ಮೊದಲು ಹೇಳಿ..."

"ಸತ್ಯಾನೇ ಅಂದ್ಕಾ, ಮದುವೆ ಆಗಿ ಹೋದ್ಮೇಲೆ ಏನು ಮಾಡ್ತಿ?" ಮೋಹನ ಎನ್ನುವ ಸುಂದರಾಂಗ ಉಡಾಫೆಯ ನಗು ನಕ್ಕಿದ್ದ. ರಾಧೆಯ ಮೈಮೇಲೆ ಮುಳ್ಳುಗಳೆದ್ದಿದ್ದುವು. ಕೊನೇಪಕ್ಷ ತನ್ನ ವ್ಯಭಿಚಾರವನ್ನು ಹೆಂಡತಿಯಿಂದ ಮರೆಮಾಚಿ ಅವಳ ಮನಃಶಾಂತಿಯನ್ನು ಉಳಿಸಿಕೊಡಬೇಕೆಂಬ ಕನಿಷ್ಠ ಸೌಜನ್ಯವೂ ಗಂಡನಿಗಿಲ್ಲ. ಹೊಸ ಹೆಂಡತಿ ಎನ್ನುವ ಆಕರ್ಷಣೆಯೂ ಇಲ್ಲ.

'ಎಂಜಲು ತಿನ್ನುವ ದುರ್ಗತಿ ತನಗೆ ಬಂದಿಲ್ಲ' ಎಂದು ಗಟ್ಟಿ ನಿರ್ಧಾರ ಮಾಡಿದಳು ರಾಧ. ಗೌರಿಹಬ್ಬದ ನೆಪದಲ್ಲಿ ತೌರೂರಿಗೆ ಹೊರಟವಳು ಆ ಮನೆಯವರು ಕೊಟ್ಟಿದ್ದನ್ನೆಲ್ಲಾ ಅಲ್ಲಿಯೇ ಕಳಚಿಟ್ಟು ಕೈ ಬೀಸಿಕೊಂಡು ಬಂದಳು. ಅಲ್ಲಿಗೆ ಮುಗಿಯಿತು ಋಣ. ಇನ್ನೂ ನಾಲ್ಕಾರು ವರ್ಷ ತೀರಿಸಬೇಕಾದಷ್ಟು ಸಾಲದ ಹೊರೆಯನ್ನು ಮೈಮೇಲೆ ಎಳೆದುಕೊಂಡಿದ್ದ ಅಪ್ಪ ಕಂಗಾಲಾಗಿ ಹೋಗಿದ್ದ. 'ಒಂದು ಮಗು ಆಯ್ತೂಂದ್ರೆ ಎಲ್ಲಾ ಸರಿಯಾಗುತ್ತೆ ಕಣೇ...' ಎನ್ನುವಂತಾ ಮಾತಾಡಿ ಅಮ್ಮನಿಂದ ಬೈಸಿಕೊಂಡಿದ್ದ. ಅವಳಿಗಿಂತಾ ಎರಡು ವರ್ಷ ಚಿಕ್ಕವನಾಗಿದ್ದರೂ, ಅದಾಗ ಮುಖದ ಮೇಲೆ ಎಳಸು ಮೀಸೆ ಚಿಗುರುತ್ತಿದ್ದರೂ, ರಾಮಕೃಷ್ಣ ಅಕ್ಕನ ನಿಲುವನ್ನು ಸಮರ್ಥಿಸುವ ಮಾತಾಡಿ ಅವಳನ್ನು ಒಪ್ಪಿಟ್ಟುಕೊಂಡಿದ್ದ. ಮೂವರೆದುರು ಏಕಾಂಗಿಯಾಗಿದ್ದ ಅಪ್ಪ,

"ಸಾವಿರಗಟ್ಲೆ ಖರ್ಚು ಮಾಡಿ ಮದುವೆ ಮಾಡ್ಲಿಲ್ವಾ? ಕೊನೇಪಕ್ಷ ಜೀವನಾಂಶ ಅಂತಾನಾದ್ರೂ ಕೊಡ್ಲಿ. ನಾಕು ಜನ ಹಿರೀಕರನ್ನು ಸೇರಿಸಿ ಪಂಚಾಯ್ತಿ ಮಾಡಿ..." ಅನ್ನುವುದರೊಳಗೆ ಸಿಡಿದೆದ್ದಿದ್ದಳು ರಾಧ.

"ಅವನ ಎಂಜಲು ಬೇಡ ನಂಗೆ. ಮಗಳಿಗೆ ಅನ್ನ ಹಾಕೋದು ಕಷ್ಟ ಅಂತಾದ್ರೆ ಹೇಳು. ಎಲ್ಲಾದ್ರೂ ಕೆಲಸ ಹುಡುಕ್ಕಂತೀನಿ."

ಈ ಕೋಣೆಯೊಳಗೆ ಇದೇ ಮಂಚದ ಮೇಲೆ ಮಲಗಿ ಮಧುಚಂದ್ರದ ಕನಸು ಕಂಡು ನವಿರುಭಾವನೆಗಳಿಂದ ಪುಳಕಿತಗೊಂಡಿದ್ದ ಹುಡುಗಿ ಇದೇ ಮಂಚದ ಮೇಲೆ ಮಲಗಿ ಮುಂದಿನ ಭವಿಷ್ಯ ನೆನೆದು ದಿಕ್ಕೆಟ್ಟಂತಾಗಿದ್ದಳು. ಕ್ರಮೇಣ ಆಘಾತದಿಂದ ಸಾವರಿಸಿಕೊಂಡು ಗಟ್ಟಿಯಾಗಿದ್ದಳು. ಬದುಕನ್ನು ಎದುರಿಸಲು ಸಜ್ಜಾಗಿದ್ದಳು. ಮುರಿದ ಸಂಬಂಧವನ್ನು ಒಗ್ಗೂಡಿಸಲು ಪದೇಪದೇ ರಾಜಿಪಂಚಾತಿಕೆಗೆ ಬರುತ್ತಿದ್ದ ಆ ಮನೆಯವರು ಮೆಟ್ಟು ಸವೆಸಿದ್ದೊಂದೇ ಫ್ರತಿಫಲವಾಗಿ ಕ್ರಮೇಣ ಬರುವುದನ್ನು ನಿಲ್ಲಿಸಿಬಿಟ್ಟಿದ್ದರು. ಸದಾಕಾಲಕ್ಕೂ ಕಡಿದುಹೋಯ್ತು ಸಂಬಂಧ. ಮುಗಿದುಹೋಯ್ತು ವೈವಾಹಿಕ ಜೀವನದ ಕತೆ.